ಆ) ವಿಜಾಪುರ ನಗರದ ಮಧ್ಯದಲ್ಲಿ ಚಾಂದ ಬಾವಿ ಮತ್ತು ತಾಜ್ ಬಾವಿಗಳು ಇವೆ. ಈ ಎರಡು ಬಾವಿಗಳು ಆರ್ಕಿಯಾಲಜಿಕಲ್ ಸರ್ವೆ ಆಫ್ ಇಂಡಿಯಾ ಇಲಾಖೆಯ ಸ್ವಾಮ್ಯಕ್ಕೆ ಒಳಪಟ್ಟಿವೆ.

ಈ ಬಾವಿಗಳ ಸುತ್ತಮುತ್ತ ವಸತಿ ಗೃಹಗಳು ಇದ್ದು ಇವುಗಳಿಂದ ಹೊರಹಾಕಲ್ಪಟ್ಟು ಮಲೀನ ನೀರು ಹಾಗೂ ಘನ ತ್ಯಾಜ್ಯ ವಸ್ತುಗಳು, ಈ ಬಾವಿಗಳಿಗೆ ಬಂದು ಸೇರುತ್ತವೆ. ಅಲ್ಲದೇ, ಈ ಬಾವಿಗಳ ನೀರನ್ನು ದನಕರುಗಳನ್ನು ತೊಳೆಯಲು ಬಟ್ಟೆ ತೊಳೆಯಲು ಮತ್ತು ಇತರ ಉದ್ದೇಶಕ್ಕಾಗಿ ಬಳಸುವುದರಿಂದ ನೀರು ಮಲೀನಗೊಂಡಿರುತ್ತದೆ.

ಈ ಬಾವಿಗಳ ನೀರು ತುಂಬಾ ಗಡುಸಾಗಿದೆ. ಹಾಗೂ ಸಾವಯವ ರಾಸಾಯನಿಕ ವಸ್ತುಗಳಿಂದ ಕೂಡಿ ಮಲೀನಗೊಂಡಿದ್ದು ಶುದ್ಧೀಕರಿಸದೇ ಉಪಯೋಗಿಸಲು ಸಾಧ್ಯವಾಗುವುದಿಲ್ಲ.

ಈ ಎರಡು ಬಾವಿಗಳು ಐತಿಹಾಸಿಕ ಸ್ಮಾರಕಗಳಾಗಿರುತ್ತವೆ. ಇಂತಹ ಸ್ಮಾರಕಗಳನ್ನು ಸಂರಕ್ಷಿಸಲು ಆರ್ಕಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾ ಇಲಾಖೆಗೆ ಬರುವುದರಿಂದ ಸದರಿಯವರಿಗೆ ದಿನಾಂಕ 17-3-99 ರಂದು ಪತ್ರ ಬರೆದು ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮೂಲಕ ಕಳಿಸಲಾಗಿದೆ. ಮತ್ತು ಈ ಎರಡು ಬಾವಿಗಳಿಗೆ ಕಸಕಡ್ಡಿ ಇತರೆ ವಸ್ತುಗಳನ್ನು ಎಸೆಯದಿರಲು ಮತ್ತು ಕಲುಷಿತ ನೀರನ್ನು ಬಿಡದಿರಲು ನಗರಸಭೆ, ಬಿಜಾಪುರ ಇವರಿಗೆ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮೂಲಕ ತಿಳಿಸಲು ದಿನಾಂಕ 17-3-99 ರಂದು ಕೋರಿದೆ.

ವಿಜಾಪುರ ಜಿಲ್ಲಾ ಆಸ್ಪತ್ರೆಗೆ ಹೆಚ್ಚಿನ ಸೌಲಭ್ಯ.

767 (1113) ಶ್ರೀ ಬಸನಗೌಡ ರಾಮನಗೌಡ ಪಾಟೀಲ್ (ಯತ್ನಾಳ್) (ಬಿಜಾಪುರ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲಾ ಆಸ್ಪತ್ರೆಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲು ನಿಗದಿಪಡಿಸಿದ 90 ಲಕ್ಷ ರೂಪಾಯಿಗಳ ಯೋಜನೆ ಈಗ ಯಾವ ಹಂತದಲ್ಲಿದೆ?

ಆ) ಈ ಕಾಮಗಾರಿಯನ್ನು ಎಂದು ಪ್ರಾರಂಭಿಸಲಾಗುವುದು. ಹಾಗೂ ಯಾವಾಗ ಪೂರ್ತಿಗೊಳಿಸಲಾಗುವುದು?

ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಬಿಜಾಪುರ ಜಿಲ್ಲಾ ಆಸ್ಪತ್ರೆಯ ನವೀಕರಣ ಮತ್ತು ವಿಸ್ತರಣಾ ಕಾಮಗಾರಿಯ ಪ್ರಸ್ತಾವನೆಯು ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ಪದ್ಧತಿಗಳ ಅಭಿವೃದ್ಧಿ ಯೋಜನೆಯಡಿ ಸೇರಿದ್ದು ಯೋಜನಾ ವರದಿಯಲ್ಲಿ ಈ ಕಾಮಗಾರಿಗೆ ರೂ. 146.70 ಲಕ್ಷ ನಿಗದಿಸಡಿಸಲಾಗಿದೆ. ಈ ಕಾಮಗಾರಿಗೆ ಅಂತಿಮ ನಕ್ಷೆ ಮತ್ತು ಅಂದಾಜು ರೂ. 295.00 ಲಕ್ಷಕ್ಕೆ ವಿಶ್ವಬ್ಯಾಂಕಿನಿಂದ ಅನುಮೋದನೆಗೊಂಡಿರುತ್ತದೆ. ಸದರಿ ಕಾಮಗಾರಿಗೆ ಟೆಂಡರುಗಳನ್ನು ಕರೆಯಲಾಗಿದ್ದು, ಟೆಂಡರುಗಳನ್ನು ಸ್ವೀಕರಿಸಲು 17-4-99 ಕೊನೆಯ ದಿನವಾಗಿರುತ್ತದೆ.

ಆ) ಟೆಂಡರುಗಳು ವಿಶ್ವಬ್ಯಾಂಕಿನಿಂದ ಅನುಮೋದನೆಗೊಂಡ ತಕ್ಷಣ ಗುತ್ತಿಗೆದಾರರಿಗೆ ಕಾಮಗಾರಿಯನ್ನು ವಹಿಸಲು ಹಾಗೂ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು ಜೂನ್ ತಿಂಗಳಲ್ಲಿ ಕಾಮಗಾರಿ ಪ್ರಾರಂಭವಾಗುವ ನಿರೀಕ್ಷೆಯಿದೆ. ಕಾಮಗಾರಿಯನ್ನು ಪ್ರಾರಂಭಗೊಂಡ ದಿನಾಂಕದಿಂದ 18 ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು.

ವಿಜಾಪುರ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಶಿವಣಗಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನೆ.

768(1114) ಶ್ರೀ ಬಸವಗೌಡ ರಾಮನಗೌಡ ಪಾಟೀಲ್ (ಯತ್ನಾಳ್) (ಬಿಜಾಪುರ):— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ವಿಧಾನ ಸಭೆಯ ವ್ಯಾಪ್ತಿಯಲ್ಲಿ ಬರುವ ಶಿವಣಗಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಬಂದಿದೆ.

ಆ) ಈ ಸಂಬಂಧ ಯಾವುದೇ ಪ್ರಸ್ತಾವನೆಯು ಜಿಲ್ಲಾ ಪಂಚಾಯತ್‌ನಿಂದ ಸ್ವೀಕೃತವಾಗಿರುವುದಿಲ್ಲ.

7439 -10